ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಲಾಸ
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.02 | Issue. 60 | Pages. 2 | Date: 01-02-2026, SUNDAY RNI NO: KARKAN/2024/89601 Kannada Daily
ಸಂಪುಟ : 02 – ಸಂಚಿಕೆ : 60 – ಪುಟಗಳು : 2 01-02-2026 ಭಾನುವಾರ Ph: 8762954248 ದರ : ₹1

# ಮಲೆನಾಡಿನಲ್ಲಿ ಹೆಚ್ಚಿದ ಕಾಡಾನೆಗಳ ಸಂಚಾರ

## ಒಂದೇ ದಿನ ಮೂರು ಆನೆಗಳು ಗೋಚರ | ಸಾರ್ವಜನಿಕರಲ್ಲಿ ಭೀತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಸಾರ್ವಜನಿಕರು ನಿತ್ಯ ಜೀವ ಭಯದಲ್ಲೇ ಕಾಲ ಕಳೆಯುವಂತಾಗಿದೆ.

ರಸ್ತೆಯ ಎಲ್ಲೆಂದರಲ್ಲಿ, ಮನೆ ಮುಂದೆ ಹಾಗೂ ಕಾಫಿ ತೋಟಗಳಲ್ಲಿ ಕಾಡಾನೆಗಳು ಪ್ರತ್ಯಕ್ಷವಾಗುತ್ತಿವೆ. ಇದರಿಂದ ಕಾಫಿ ತೋಟ ಕೆಲಸಕ್ಕೆ ಹೋಗಲು ಕಾರ್ಮಿಕರು ಹಿಂದೇಟು ಹಾಕುತ್ತಿದ್ದಾರೆ. ಭೀಮ ಬಿಕ್ಕೋಡು ಭಾಗದಲ್ಲಿ ಓಡಾಡುತ್ತಿದ್ದರೆ ಮತ್ತೊಂದು ಕಡೆ ಇನ್ನೊಂದು ಕಾಡಾನೆ ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳ್ಳಂ ಬೆಳಿಗ್ಗೆಯೇ ಅರೇಹಳ್ಳಿ ಪಟ್ಟಣದ ಮನೆಗಳ ಮುಂಭಾಗದಲ್ಲೆ ಕಾಣಿಸಿಕೊಂಡು ಆತಂಕ ಸೃಷ್ಟಿಸಿದೆ. ಶುಕ್ರವಾರ ರಾತ್ರಿ ಮೂಡಿಗೆರೆಯಿಂದ ಅರೇಹಳ್ಳಿಗೆ ಕಾನನಹಳ್ಳಿ ಗ್ರಾಮದ ರಸ್ತೆ ತಿರುವಿನಲ್ಲಿ ಬರುತ್ತಿದ್ದ ಬೈಕ್ ಸವಾರರಿಗೆ ಎರಡು ಆನೆಗಳು ಪ್ರತ್ಯಕ್ಷವಾಗಿ ಅವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರಾತ್ರಿಯಾದ್ದರಿಂದ ಕಾಡಾನೆಗಳು ಕಾಣಿಸದೆ ದಿಢೀರನೆ ಬಂದಿದ್ದಾರೆ. ದೈತ್ಯಾಕಾರದ ಎರಡೂ ಆನೆಗಳು ಬೈಕ್ ಸಮೀಪದಲ್ಲೇ ಇದ್ದರೂ ಅವರ ಮೇಲೆ ದಾಳಿ ನಡೆಸದೆ ರಸ್ತೆ ಪಕ್ಕಕ್ಕೆ ಹೋಗಿವೆ. ಅಪಾಯದ ಮುನ್ಸೂಚನೆ ಅರಿತ ಸವಾರ ತಕ್ಷಣ ವಾಪಾಸ್ಸಾಗಿದ್ದಾನೆ. ಈ ದೃಶ್ಯವನ್ನು ಹಿಂಬದಿಯಲ್ಲಿದ್ದ ವಾಹನ ಸವಾರರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

### ಸೋಲಾರ್ ಗೇಟ್ ದಾಟಿದ ಭೀಮ

ಬಿಕ್ಕೋಡು ಸಮೀಪದ ಕಾಫಿ ಎಸ್ಟೇಟ್‌ನ ಪ್ರವೇಶ ದ್ವಾರದ ಗೇಟ್‌ಗೆ ಕೆಲ ದಿನಗಳ ಹಿಂದಷ್ಟೆ ಅಳವಡಿಸಿದ್ದ ಸೋಲಾರ್ ವಿದ್ಯುತ್ ತಂತಿಯಲ್ಲಿ ವಿದ್ಯುತ್ ಇದೆಯೋ ಇಲ್ಲವೊ ಎಂಬುದನ್ನು ಕಾಲಿನಿಂದ ಪರಿಶೀಲಿಸಿದ ಕಾಡಾನೆ ಭೀಮ ಗೇಟ್ ಅನ್ನು ತಳ್ಳಿ ಒಳ ನುಗ್ಗಿದೆ. ಅರೇಹಳ್ಳಿ-ಬಿಕ್ಕೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಓಡಾಡುತ್ತಿರುವ ಭೀಮ ಸಾರ್ವಜನಿಕರಿಗೆ ದರ್ಶನ ನೀಡುತ್ತಿದ್ದಾನೆ. ಎಸ್ಟೇಟ್‌ಗೆ ಹೋಗುವ ಗೇಟ್ ಅನ್ನು ಸಹ ನೂತನವಾಗಿ ಅಳವಡಿಸಿ ಅದಕ್ಕೂ ಸೋಲಾರ್ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು. ಆದರೆ, ಈ ತೋಟದೊಳಗೆ ರಾಜಾ ರೋಷವಾಗಿ ಹಿಂದಿನಿಂದಲೂ ಓಡಾಡುತ್ತಲೇ ಇದ್ದ ಕಾಡಾನೆ ಭೀಮ ಎರಡು ದಿನಗಳ ಹಿಂದೆಯೂ ಎಸ್ಟೇಟ್ ಪ್ರವೇಶಿಸಲು ಬಂದ ಸಂದರ್ಭ ಗೇಟ್ ಹಾಕಿತ್ತು. ಆನೆ ಬಂದಿದ್ದನ್ನು ನೋಡಿದ ಲೈನ್ ಮನೆಯಲ್ಲಿದ್ದ ಜನರು ಮನೆಯೊಳಕ್ಕೆ ಸೇರಿಕೊಂಡರು. ಈ ಸಂದರ್ಭ ಭೀಮ ಆನೆ ತನ್ನ ಒಂದು ಕಾಲಿನಿಂದ ಗೇಟ್ ಅನ್ನು ನಿಧಾನವಾಗಿ ಮುಟ್ಟಿ ವಿದ್ಯುತ್ ಸಂಪರ್ಕ ಇದೆಯೋ ಇಲ್ಲವೋ ಎಂಬುದನ್ನು ನೋಡಿ ಯಾವಾಗ ವಿದ್ಯುತ್ ಇಲ್ಲ ಎಂಬುದು ಖಾತ್ರಿಯಾಯಿತೋ ತಕ್ಷಣವೇ ತನ್ನ ಸೊಂಡಿಲಿನಿಂದ ಕಬ್ಬಿಣದ ಗೇಟ್ ತಳ್ಳಿ ಎಸ್ಟೇಟ್‌ನೊಳಕ್ಕೆ ತನ್ನ ಪಾಡಿಗೆ ತಾನು ಮುಂದೆ ಸಾಗಿದ್ದರಿಂದ ಜನರು ನಿಟ್ಟುಸಿರು ಬಿಟ್ಟರು. ನಂತರ ಅಲ್ಲಿಂದ ಬಿಕ್ಕೋಡು ಗ್ರಾಮದೊಳಗಿನ ಜನನಿಬಿಡ ಪ್ರದೇಶದಲ್ಲಿ ಸಾಕಷ್ಟು ದಿನಗಳ ನಂತರ ಯಾವುದೇ ಆತಂಕವಿಲ್ಲದೆ ನಿಧಾನವಾಗಿ ರಸ್ತೆಯಲ್ಲಿ ನಡೆದುಕೊಂಡು ಗ್ರಾಮದ ಮುಖ್ಯ ರಸ್ತೆಯಲ್ಲಿ ಸಾಗಿದ ಭೀಮ, ವಾಸದ ಮನೆಯೊಂದರ ಮುಂದೆ ಕೆಲಕಾಲ ನಿಂತಿದ್ದರಿಂದ ಕಾಡಾನೆಯನ್ನು ನೋಡಿದ ಗ್ರಾಮಸ್ಥರು ಫೋಟೋ ಹಾಗೂ ವಿಡಿಯೋ ಚಿತ್ರೀಕರಣಕ್ಕೆ ಮುಗಿಬಿದ್ದ ದೃಶ್ಯ ಕಾಣಬಹುದಾಗಿತ್ತು. ಕೆಲ ಸಮಯದ ನಂತರದಲ್ಲಿ ಕಾಡಾನೆ ಸಮೀಪದ ಕಾಫಿ ತೋಟದೊಳಕ್ಕೆ ತೆರಳಿತು. ಈ ಆನೆಯ ಚಲನ ವಲನ ಗಮನಿಸುತ್ತಿದ್ದ ಎಲೆಫೆಂಟ್ ಟಾಸ್ಕ್ ಫೋರ್ಸ್(ಇಟಿಎಫ್) ಸಿಬ್ಬಂದಿ ಎಚ್ಚರಿಕೆಯಿಂದ ಹಿಂಬಾಲಿಸಿ ಭೀಮನನ್ನು ಕಾಡಿಗಟ್ಟುವಲ್ಲಿ ಯಶಸ್ವಿಯಾದರು.



### ಮನೆ ಮುಂದೆ ಗಜರಾಜ ಪ್ರತ್ಯಕ್ಷ

ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಿಗ್ಗೆ ಅರೇಹಳ್ಳಿ ಪಟ್ಟಣದ ಮನೆಗಳ ಮುಂದೆಯೇ ಮತ್ತೊಂದು ಕಾಡಾನೆ ಕಾಣಿಸಿಕೊಂಡು ಸುತ್ತಾಡುತ್ತಿರುವುದನ್ನು ಕಂಡು ಜನರು ಗಾಬರಿಗೊಂಡರೆ ಕಾಡಾನೆ ಮಾತ್ರ ತನ್ನ ಪಾಡಿಗೆ ತಾನು ಮುಂದೆ ಸಾಗಿದೆ. ಬೆಳಿಗ್ಗೆಯೇ ಅರೇಹಳ್ಳಿ ಪಟ್ಟಣಕ್ಕೆ ಪ್ರವೇಶಿಸಿದ ಕಾಡಾನೆಯಿಂದಾಗಿ ಮಲಗಿದ್ದ ಜನರು ಗಾಬರಿಯಿಂದ ಎದ್ದು ಬೀದಿಗೆ ಬರುವಂತಾಗಿತ್ತು. ನಂತರ ಆನೆಯೂ ನೇರವಾಗಿ ಸಮೀಪದ ಕಾಡಿನತ್ತ ಪ್ರಯಾಣ ಬೆಳೆಸಿದ್ದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟರು.

# ಪುರಸಭೆ ಕಟ್ಟಡಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ: ಶಾಸಕ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಸಕಲೇಶಪುರ: ಪುರಸಭೆ ಸ್ವಂತ ಕಟ್ಟಡಕ್ಕಾಗಿ ಪೌರಾಡಳಿತ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಇಷ್ಟೊಂದು ವರ್ಷಗಳಾದರೂ ಪುರಸಭೆಗೆ ಸ್ವಂತ ಕಟ್ಟಡ ಇಲ್ಲದಿರುವುದು ವಿಷಾದಕರ ಸಂಗತಿಯಾಗಿದೆ. ಪುರಸಭೆ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ವಿಶೇಷ ಅನುದಾನ ಕೋರಿ ಪೌರಾಡಳಿತ ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರದಿಂದ ಡಿಪಿಆರ್ ಸಲ್ಲಿಸುವಂತೆ ಸೂಚನೆ ಬಂದಿದೆ. ಶೀಘ್ರದಲ್ಲೇ ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಪುರಭವನ ಕಟ್ಟಡದಲ್ಲಿ ಉಂಟಾಗಿರುವ ಮಳೆ ನೀರು ಸೋರಿಕೆ ಸಮಸ್ಯೆ ಹಾಗೂ ಹಳೆಯತನವನ್ನು ಗಮನಿಸಿ, ಪುರಭವನ ನವೀಕರಣ ಕಾಮಗಾರಿಗೆ 1.05 ಕೋಟಿ ರೂ. ಅನುದಾನವನ್ನು ಮೀಸಲಿಡಲಾಗಿದೆ. ಮೂಲ ವಿನ್ಯಾಸವನ್ನು ಉಳಿಸಿಕೊಂಡು ಸಭಾಂಗಣ, ಆಡಿಟೋರಿಯಂ, ಶೌಚಾಲಯಗಳು ಹಾಗೂ ಇತರೆ ಸೌಲಭ್ಯಗಳನ್ನು ಸುಧಾರಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಗರದ ವಾಣಿಜ್ಯ ಭವನದ ಮುಂಭಾಗದಲ್ಲಿ ಹಣ್ಣು ಮತ್ತು ಹೂವಿನ ವ್ಯಾಪಾರಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು, ಎಸ್‌ಬಿಎಂ ಪಕ್ಕದಲ್ಲಿ ಸ್ವಚ್ಛ ಫುಡ್ ಕೋರ್ಟ್ ನಿರ್ಮಿಸುವುದು, ಹೇಮಾವತಿ ಪ್ರತಿಮೆಯ ಮುಂಭಾಗದಲ್ಲಿ 50 ಅಡಿ ಎತ್ತರದ ಧ್ವಜಸ್ತಂಭ ಸ್ಥಾಪನೆ, ನೂತನ ಬಸ್ ನಿಲ್ದಾಣ ಹಾಗೂ ಎಸಿ ಆಫೀಸ್ ಸರ್ಕಲ್‌ನಲ್ಲಿ ಅಶೋಕ ಸ್ತಂಭ ನಿರ್ಮಿಸುವ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ಪಟ್ಟಣದಲ್ಲಿ ಹಾಳಾಗಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ಕ್ರಿಶ್ಚಿಯನ್ ಸ್ಮಶಾನ ಸಮೀಪದ ರಸ್ತೆ, ರೋಟರಿ ಸ್ಕೂಲ್ ರಸ್ತೆ ಹಾಗೂ ವಿವಿಧ ಉದ್ಯಾನವನಗಳ ಅಭಿವೃದ್ಧಿಗೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗುವುದು ಎಂದು ಹೇಳಿದರು. ಸಾರ್ವಜನಿಕರಿಂದ ಬಂದಿರುವ ಬೇಡಿಕೆಗಳನ್ನು ದಾಖಲಿಸಿಕೊಂಡು, ಮುಂದಿನ ಬಜೆಟ್‌ನಲ್ಲಿ ಸಾಧ್ಯವಾದಷ್ಟು ಸೇರಿಸಲಾಗುವುದು ಎಂದು ಭರವಸೆ ನೀಡಿದರು.

# ಬಿ.ಎಂ. ರಸ್ತೆ ಪಾರ್ಕಿಂಗ್‌ಗೆ ಹೊಸ ನಿಯಮ: ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಬಿ.ಎಂ. ರಸ್ತೆಯ ಎರಡೂ ಬದಿಗಳಲ್ಲಿ ದಿನ ಬಿಟ್ಟು ದಿನ ಒಂದೊಂದು ಬದಿಯಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದ್ದಾರೆ.

ಪಟ್ಟಣದ ಬಿ.ಎಂ. ರಸ್ತೆಯ ಎರಡೂ ಬದಿಗಳಲ್ಲಿ ರಸ್ತೆ ಗುಂಡಿ ಮುಚ್ಚಿ ಡಾಂಬರಿಕರಣ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ಈಗಾಗಲೇ ಪಟ್ಟಣದಲ್ಲಿ ಬೈಪಾಸ್ ರಸ್ತೆ ನಿರ್ಮಾಣವಾಗಿದ್ದರೂ ವಾಹನ ಸಂಚಾರದ ಒತ್ತಡ ಕಡಿಮೆಯಾಗಿಲ್ಲ. ಇದರಿಂದ ಬಿ.ಎಂ. ರಸ್ತೆಯಲ್ಲಿ ಟ್ರಾಫಿಕ್ ಕಿರಿಕಿರಿ ಹೆಚ್ಚಾಗಿದೆ ಎಂದು ಹೇಳಿದರು.

ಪ್ರಸ್ತುತ ಬಿ.ಎಂ. ರಸ್ತೆಯ ಒಂದು ಬದಿಯಲ್ಲಿ ಮಾತ್ರ ವಾಹನಗಳ ನಿಲುಗಡೆಗೆ ಅವಕಾಶ ನೀಡಲಾಗುತ್ತಿದ್ದು, ರಸ್ತೆ ಅಗಲ ಕಿರಿದಾಗಿರುವುದರಿಂದ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಎರಡು ಬದಿಗಳಲ್ಲೂ ಪರ್ಯಾಯ ದಿನಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ಸ್ಪಷ್ಟಪಡಿಸಿದರು.

ಅಧಿಕಾರಿಗಳು ಸಾರ್ವಜನಿಕರನ್ನು ಅನಗತ್ಯವಾಗಿ ಅಲೆದಾಡಿಸಬಾರದು. ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚನೆ ನೀಡಿದರು.

# ನಿವೇಶನ ರಗಳೆ: ಯಶ್ ತಾಯಿ ಪುಷ್ಪಾ-ದೇವರಾಜು ರಂಪಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ವಿದ್ಯಾನಗರದಲ್ಲಿ ನಿವೇಶನದ ಮಾಲಿಕತ್ವ ಹೊಂದಿರುವ ಕನ್ನಡ ಚಲನಚಿತ್ರ ನಾಯಕ ನಟ ಯಶ್ ಅವರ ತಾಯಿ ಪುಷ್ಪಾ ಹಾಗೂ ದೇವರಾಜು ಎಂಬುವರ ನಡುವೆ ಉಂಟಾಗಿರುವ ಕಗ್ಗಂಟು ಶನಿವಾರ ಮತ್ತಷ್ಟು ವಾಗ್ವಾದ-ಜಟಾಪಟಿಗೆ ಕಾರಣವಾಗಿದೆ.

ನಿವೇಶನ ವಿಚಾರವಾಗಿ ಪುಷ್ಪಾ ಮತ್ತು ಜಿಪಿಎ ಹೋಲ್ಡರ್ ದೇವರಾಜು ನಡುವಿನ ತೀವ್ರ ಮಾತಿನ ಚಕಮಕಿ ನಡೆಯಿತು. ಹೀಗಾಗಿ ವಿವಾದ ಮತ್ತಷ್ಟು ಬಿಕ್ಕಟ್ಟಾಗಿದೆ. ನಿವೇಶನದ ಬಳಿ ಪುಷ್ಪಾ ಅವರು ಆಗಮಿಸಿದ ಸಂದರ್ಭದಲ್ಲೇ ಜಿಪಿಎ ಹೋಲ್ಡರ್ ದೇವರಾಜು ಕೂಡ ಸ್ಥಳಕ್ಕೆ ಭೇಟಿ ನೀಡಿದರು. ಈ ವೇಳೆ ನಿವೇಶನದ ನಿಜವಾದ ಮಾಲೀಕತ್ವ ಮತ್ತು ದಾಖಲೆಗಳ ಬಗ್ಗೆ ಪುಷ್ಪಾ ಅವರು ಪ್ರಶ್ನೆ ಎತ್ತಿದ್ದು, ನಿವೇಶನಕ್ಕೆ ಸಂಬಂಧಿಸಿದ ಅಧಿಕೃತ ದಾಖಲೆ ತೋರಿಸಿ ಎಂದು ಒತ್ತಾಯಿಸಿದರು. ದಾಖಲೆ ವಿಚಾರವಾಗಿ ಆರಂಭವಾದ ಸಂಭಾಷಣೆ ಕೆಲವೇ ಕ್ಷಣಗಳಲ್ಲಿ ಮಾತಿನ ಚಕಮಕಿಗೆ ತಿರುಗಿತು.

ಈ ಸಂದರ್ಭದಲ್ಲಿ ಪುಷ್ಪಾ ಮಾತನಾಡಿ, ನಾನು ಸೆಲೆಬ್ರಿಟಿಯ ತಾಯಿ ಎಂಬ ಕಾರಣಕ್ಕೆ ಇಲ್ಲಿಗೆ ಬಂದಿಲ್ಲ. ನಾನು ಇಲ್ಲಿಯೇ ಹುಟ್ಟಿ ಬೆಳೆದವಳು. ನನ್ನ ಹಕ್ಕುಗಳಿಗಾಗಿ ನಿಲ್ಲುತ್ತಿದ್ದೇನೆ ಎಂದು ಹೇಳಿದರು. ಜೊತೆಗೆ, ಇನ್ನು ಮುಂದೆ ಈ ನಿವೇಶನದೊಳಗೆ ಕಾಲಿಡಬಾರದು ಎಂದು ದೇವರಾಜು ಅವರಿಗೆ ಎಚ್ಚರಿಕೆ ನೀಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ದೇವರಾಜು, ಈ ರೀತಿ ಮಾತನಾಡುವುದು ಸರಿಯಲ್ಲ. ಕಾನೂನು ಪ್ರಕಾರವೇ ಎಲ್ಲವೂ ನಡೆಯಬೇಕು ಎಂದು ವಾದಿಸಿದರು.

ಇದರಿಂದ ವಾತಾವರಣ ಮತ್ತಷ್ಟು ಉದ್ವಿಗ್ನಗೊಂಡಿತು. ಇದರಿಂದ ಸಿಟ್ಟಾದ ಪುಷ್ಪಾ ಅವರು, ರೌಡಿಗಳನ್ನು ಕರೆದುಕೊಂಡು ರೌಡಿಸಂ ಮಾಡ್ತಿಯಾ, ಈ ವಿಚಾರವಾಗಿ ನಾನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ನೇರವಾಗಿ ದೂರು ನೀಡುತ್ತೇನೆ. ಇನ್ನು ಮುಂದೆ ಇಲ್ಲಿಗೆ ಬಂದರೆ ಸುಮ್ಮನಿರಲ್ಲ ಎಂದು ಕಠಿಣ ಶಬ್ದಗಳಲ್ಲಿ ಎಚ್ಚರಿಕೆ ನೀಡಿದರು. ಅಲ್ಲದೆ ಕೆಲವೇ ದಿನಗಳಲ್ಲಿ ಮತ್ತೆ ಕಾಂಪೌಂಡ್ ಹಾಕುವುದಾಗಿ ಯಶ್ ಅವರ ತಾಯಿ ಪುಷ್ಪ ಹೇಳಿದ್ದಾರೆ.

ಈ ಸಮಯದಲ್ಲಿ ಸುತ್ತಮುತ್ತಲ ನಿವಾಸಿಗಳು ಹಾಗೂ ಸಾರ್ವಜನಿಕರು ಜಮಾಯಿಸಿದ್ದು, ವಿದ್ಯಾನಗರ ಬಡಾವಣೆಯಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಹಿರಿಯರು ಹಾಗೂ ಸ್ಥಳೀಯರು ಮಧ್ಯಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸುವ ಪ್ರಯತ್ನ ಮಾಡಿದರು.

ನಿವೇಶನದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಯಾರು ನಿಜವಾದ ಹಕ್ಕುದಾರರು, ಜಿಪಿಎ ಆಧಾರದ ಮೇಲೆ ದೇವರಾಜು ಅವರಿಗೆ ಇರುವ ಅಧಿಕಾರ ಎಷ್ಟರ ಮಟ್ಟಿಗೆ ಮಾನ್ಯ, ದಾಖಲೆಗಳ ಸತ್ಯಾಸತ್ಯತೆ ಏನು ಎಂದು ಸ್ಪಷ್ಟವಾಗಿಲ್ಲ. ಈ ಕಾರಣದಿಂದಾಗಿ ವಿವಾದ ಮತ್ತಷ್ಟು ಗಂಭೀರ ಹಂತಕ್ಕೆ ಹೋಗುವ ಸಾಧ್ಯತೆ ಹೆಚ್ಚಾಗಿದೆ.

# ಸುಜಲ ಕಾಲೇಜಿನ ದೇಶ್ನಾ ಶೆಟ್ಟಿಗೆ ಗಣರಾಜ್ಯೋತ್ಸವ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಂಗಳೂರಿನಲ್ಲಿ ನಡೆದ 5ನೇ ರಾಷ್ಟ್ರ ಮಟ್ಟದ ಫಿನ್ ಈಜು ಸ್ಪರ್ಧೆಯ ಬಾಲಕಿಯರ 4 100 ಮೀಟರ್ ಜೂನಿಯರ್ ವಿಭಾಗದಲ್ಲಿ ಸುಜಲ ಕಾಲೇಜಿನ ದೇಶ್ನಾ ಪಿ. ಶೆಟ್ಟಿ ಪ್ರಥಮ ಸ್ಥಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಕ್ರೀಡಾ ಕ್ಷೇತ್ರದ ಸಾಧನೆಗೆ ಜಿಲ್ಲೆಯ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ 77ನೇ ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈ ಸಾಧನೆಗೆ ಸುಜಲ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಸ್. ಲೋಕೇಶ್, ಕಾರ್ಯದರ್ಶಿ ಶ್ವೇತಾ ಲೋಕೇಶ್, ಪ್ರಾಂಶುಪಾಲರು ಹಾಗು ಸಿಬ್ಬಂದಿ ಅಭಿನಂದಿಸಿದ್ದಾರೆ.

# ಎಲ್‌ಐಸಿಯಲ್ಲಿ ಖಾಸಗಿ ಬಂಡವಾಳ ಹೂಡಿಕೆ ಸರಿಯಲ್ಲ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶದ ಸ್ವಾಯತ್ತ ಸಂಸ್ಥೆ ಲಕ್ಷಾಂತರ ಕೋಟಿ ರೂ. ಬಂಡವಾಳ ಹೊಂದಿರುವ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದಲ್ಲಿ ಖಾಸಗಿ ಬಂಡವಾಳದ ಹೂಡಿಕೆಗೆ ಅವಕಾಶ ನೀಡಿರುವುದು ದೇಶಕ್ಕೆ ಮಾರಕ ಎಂದು ವಿಮಾ ನೌಕರರ ಸಂಘದ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಕೆ.ರಾಮು ಹೇಳಿದರು.

ನಗರದ ಸಿಐಟಿಯು ಕಚೇರಿ ಶ್ರಮದಲ್ಲಿ ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದಿಂದ ಆಯೋಜಿಸಿದ್ದ ಭಾರತದ ಆರ್ಥಿಕತೆಯಲ್ಲಿ ಸಾರ್ವಜನಿಕ ವಲಯ ವಿಮಾ ರಂಗದ ಮಹತ್ವ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ದೇಶದ ಎಲ್ಲಾ ಜನರಿಗೂ ವಿಮಾ ಸುರಕ್ಷತೆ ಕೊಡಬೇಕು ಎನ್ನುವ ಸದುದ್ದೇಶದ ಸೇವಾ ಸಂಸ್ಥೆ ಎಲ್‌ಐಸಿಯನ್ನೂ ಈಗ ಲಾಭದ ಸಂಸ್ಥೆಯಾಗಿ ಮಾರ್ಪಾಡು ಮಾಡಲಾಗುತ್ತಿದೆ. ಎಲ್‌ಐಸಿಯ ಬಂಡವಾಳ ಜನರ ಬಂಡವಾಳ. ಇದು ಹೂಡಿಕೆದಾರರ ಪಾಲಾಗುವಂತೆ ಮಾಡುವ ಹುನ್ನಾರ ನಡೆಯುತ್ತಿದೆ ಎಂದರು.

ಜನರಿಗೆ ಈ ಬಗ್ಗೆ ಅರಿವು ಮೂಡಿಸಬೇಕು. ದೇಶದ ಆರ್ಥಿಕತೆ ಸದೃಢವಾಗಿ ಇರಬೇಕಾದರೆ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತಷ್ಟು ಸದೃಢ ಆಗಬೇಕು. ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಹೂಡಿಕೆ ಹಿಂತೆಗೆತ ನಿಲ್ಲಬೇಕು. ಇಂತಹ ದೇಶದ ಸಾರ್ವಜನಿಕ ವಲಯದ ಸಂಸ್ಥೆ ಉಳಿಸುವ ನಿಟ್ಟಿನಲ್ಲಿ ನಡೆಯುವ ಹೋರಾಟದಲ್ಲಿ ಜನರು ಭಾಗಿಯಾಗಬೇಕೆಂದರು.

# ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂಯುವ ಘಟಕದಿಂದ ನಗರದ ಶ್ರೀ ಗುರುಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಶನಿವಾರ ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯಸಂಸ್ಮರಣೋತ್ಸವ ಹಮ್ಮಿಕೊಳ್ಳಲಾಗಿತ್ತು.

ಯಳನಾಡು ಮಹಾಸಂಸ್ಥಾನದ ಜ್ಞಾನಪ್ರಭು ಸಿದ್ದರಾಮ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಸಮಾಜದ ಕಲ್ಯಾಣಕ್ಕೆ ನಿರಂತರವಾಗಿ ಶ್ರಮಿಸುತ್ತಿರುವ ಸಿದ್ದಗಂಗಾ ಮಠವು ಇತರ ಧಾರ್ಮಿಕ ಕೇಂದ್ರಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದೆ ಎಂದರು.

ಹಸಿದವರಿಗೆ ಅನ್ನ, ಅಕ್ಷರ, ಆಶ್ರಯ, ಅರಿವಿನ ಬೆಳಕು ತೋರಿದ ಕೀರ್ತಿ ಸಿದ್ದಗಂಗಾ ಶ್ರೀಮಠಕ್ಕೆ ಸಲ್ಲುತ್ತದೆ. ಶತಾಯುಷಿ ಶ್ರೀ ಶಿವಕುಮಾರ ಸ್ವಾಮೀಜಿ ಆಧುನಿಕ ಬಸವಣ್ಣ, ನಡೆದಾಡುವ ದೇವರು ಎಂದೇ ನಾಡಿನ ಉದ್ದಗಲಕ್ಕೂ ಮನ್ನಣೆ ಪಡೆದಿದ್ದಾರೆ. ನೂರಾರು ಶಾಲಾ, ಕಾಲೇಜು ಆರಂಭಿಸಿ ಶಿಕ್ಷಣ ಕ್ರಾಂತಿ ನಡೆಸುವ ಮೂಲಕ ಜನ-ಮನದ ಅಜ್ಞಾನದ ಕತ್ತಲು ಕಳೆಯುವ ಕೆಲಸ ಮಾಡಿದ್ದಾರೆ. ಶ್ರೀ ಗಳ ಸೇವೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅಂತಹ ದಾರ್ಶನಿಕರ ತತ್ವ, ಚಿಂತನೆ, ಆದರ್ಶ ಗುಣಗಳನ್ನು ಅಳವಡಿಸಿಕೊಂಡು ಮುಂದೆ ಸಾಗೋಣ. ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಪುಣ್ಯ ಸ್ಮರಣೆಯನ್ನು ಯುವ ಘಟಕ ಆಯೋಜಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಹಳೇಬೀಡು ಪುಷ್ಪಗಿರಿ ಸಂಸ್ಥಾನದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಒಗ್ಗಟ್ಟಿನ ಕೊರತೆಯಿಂದ ಜಿಲ್ಲೆಯಲ್ಲಿ ಒಬ್ಬ ಶಾಸಕನನ್ನು ಪಡೆಯದಂತಾಗಿದೆ. ರಾಜ್ಯದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ದ್ವೇಷ, ಅಸೂಯೆ, ಅಸಹನೆ ಬದಿಗಿರಿಸಿ ಮುಂಬರುವ ದಿನಗಳಲ್ಲಿ ಸಮಾಜದ ಪ್ರಗತಿಗೆ ಒಟ್ಟಾಗಿ ದುಡಿಯೋಣ. ಶತಮಾನದ ಯುಗಪುರುಷ ಶ್ರೀ ಶಿವಕುಮಾರ ಸ್ವಾಮೀಜಿ ನಮ್ಮೆಲ್ಲರ ಬದುಕಿಗೆ ಪ್ರೇರಣೆಯಾಗಲಿ ಎಂದು ಆಶಿಸಿದರು.

ಮಾಡಾಳು ನಿರಂಜನ ಪೀಠದ ಶ್ರೀ ರುದ್ರಮುನಿ ಸ್ವಾಮೀಜಿ, ಕೋಳಗುಂದ ಕೇದಿಗೆ ಮಠದ ಜಯಚಂದ್ರ ಶೇಖರ ಸ್ವಾಮೀಜಿ, ಡಿ.ಎಂ.ಕುರ್ಕೆ ವಿರಕ್ತ ಮಠದ ಶಶಿಶೇಖರ ಸಿದ್ದಬಸವ ಸ್ವಾಮೀಜಿ, ಮಾಜಿ ಶಾಸಕರಾದ ಕೆ.ಪಿ.ಪ್ರಭುಕುಮಾರ್, ಜಿ.ಎಸ್.ಪರಮೇಶ್ವರಪ್ಪ, ಎನ್.ಆರ್. ಸಂತೋಷ್, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಇತರರಿದ್ದರು.

# ಪೊಲೀಸ್ ಠಾಣೆಯ ಕಾರ್ಯವೈಖರಿ ತಿಳಿದ ಅರೇಹಳ್ಳಿ ವಿದ್ಯಾರ್ಥಿಗಳು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತೆರೆದ ಮನೆ ಕಾರ್ಯಕ್ರಮದ ಅಂಗವಾಗಿ ತಾಲ್ಲೂಕಿನ ಅರೇಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳನ್ನುಅರೇಹಳ್ಳಿ ಪೊಲೀಸ್ ಠಾಣೆಗೆ ಆಹ್ವಾನಿಸಿ ಪೊಲೀಸ್ ಠಾಣೆಯ ಕಾರ್ಯವೈಖರಿ ಹಾಗು ಸಾರ್ವಜನಿಕ ಸುರಕ್ಷತೆಗೆ ಸಂಬಂಧಿಸಿದಂತೆ ಪಿಎಸ್‌ಐ ಶೋಭಾ ಭರಮಣ್ಣವರ್ ಅವರು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ತುರ್ತು ಸಂದರ್ಭ ಸಹಾಯಕ್ಕಾಗಿ ಬಳಸಬಹುದಾದ 112 ಸಹಾಯವಾಣಿ ಸೇವೆಯ ಮಹತ್ವ, ಪೋಕ್ಸೋ ಕಾಯ್ದೆಯಡಿ ಮಕ್ಕಳಿಗೆ ಇರುವ ಕಾನೂನು ರಕ್ಷಣೆ, ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಉದ್ದೇಶ ಮತ್ತು ಪರಿಣಾಮ, ಸಂಚಾರ ನಿಯಮ ಪಾಲಿಸುವ ಅಗತ್ಯತೆ ಹಾಗು ಸೈಬರ್ ಕ್ರೈಂ ಸಂಬಂಧಿತ ಅಪರಾಧ, ಆನ್‌ಲೈನ್ ಮೋಸ, ನಕಲಿ ಲಿಂಕ್, ಒಟಿಪಿ ದುರುಪಯೋಗದಿಂದ ದೂರ ಇರುವ ಕ್ರಮಗಳು ಕುರಿತು ತಿಳಿಸಿದರು.

ವಿದ್ಯಾರ್ಥಿಗಳು ಕಾನೂನಿನ ಬಗ್ಗೆ ಅರಿವು ಹೊಂದಿದರೆ ಸಮಾಜದಲ್ಲಿ ಅಪರಾಧಗಳನ್ನು ತಡೆಯಲು ಸಾಧ್ಯ. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಎಚ್ಚರಿಕೆ ಅಗತ್ಯ. ಅಪರಿಚಿತರಿಂದ ಬರುವ ಕರೆ, ಸಂದೇಶ ಹಾಗು ಲಿಂಕ್‌ಗಳಿಗೆ ತಕ್ಷಣ ಪ್ರತಿಕ್ರಿಯಿಸದೆ ಪೋಷಕರು ಅಥವಾ ಶಿಕ್ಷಕರಿಗೆ ತಿಳಿಸಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಜೀವ ರಕ್ಷಣೆಗೆ ಆದ್ಯತೆ ನೀಡಬೇಕು. ಅಕ್ರಮ ಚಟುವಟಿಕೆ, ಬಾಲ್ಯ ವಿವಾಹ ಅಥವಾ ಮಕ್ಕಳ ಮೇಲಿನ ದೌರ್ಜನ್ಯಗಳ ಮಾಹಿತಿ ನಿಮಗೆ ದೊರೆತರೆ ಭಯವಿಲ್ಲದೆ ಪೊಲೀಸರಿಗೆ ಹೇಳಬೇಕು. ಪೊಲೀಸ್ ಇಲಾಖೆ ಸದಾ ಸಾರ್ವಜನಿಕರ ರಕ್ಷಣೆಗೆ ಬದ್ಧವಾಗಿದ್ದು, ವಿದ್ಯಾರ್ಥಿಗಳು ಧೈರ್ಯದಿಂದ ಪೊಲೀಸರ ನೆರವು ಪಡೆಯಬಹುದಾಗಿದೆ ಎಂದರು.

ಪೊಲೀಸ್ ಸಿಬ್ಬಂದಿ ಸಂಶುದ್ದೀನ್ ಸೊನ್ನದ್, ರವಿಚಂದ್ರ, ಮಂಜುನಾಥ, ದರ್ಶನ್ ಇತರರಿದ್ದರು.

# ನಶಾ ಮುಕ್ತ ಹಾಸನ ಜಾಗೃತಿ ಅಭಿಯಾನ ಇಂದು

ಹಾಸನ: ನಶಾ ಮುಕ್ತ ಹಾಸನ ಜಾಗೃತಿ ಅಭಿಯಾನ ಜಾಥಾ ಫೆ. 1ರ ಭಾನುವಾರ ಬೆಳಿಗ್ಗೆ 7 ಗಂಟೆಗೆ ನಗರದಲ್ಲಿ ನಡೆಯಲಿದೆ.

ಟೆಕ್ನೋ ಸ್ಪೋರ್ಟ್ಸ್ ಸಿಟಿ ಪಾಯಿಂಟ್‌ನಿಂದ ಜಾಥಾ ಹಮ್ಮಿಕೊಂಡಿದ್ದು, ಬಿಎಂ ರಸ್ತೆಯಿಂದ ಜಿಲ್ಲಾ ಬಂಧಿಖಾನೆ ತಲುಪಿ ಪುನಃ ಸಿಟಿ ಪಾಯಿಂಟ್‌ಗೆ ತಲುಪಲಿದೆ. ಮೊದಲು ಬರುವ 200 ಜನರಿಗೆ ಉಚಿತ ಟೀ ಶರ್ಟ್ ನೀಡಲಾಗುತ್ತದೆ. ಭಾಗವಹಿಸುವ ಎಲ್ಲರಿಗೂ ಪ್ರಮಾಣ ಪತ್ರ ಮತ್ತು ಲಘು ಉಪಹಾರ ವ್ಯವಸ್ಥೆ ಇರುತ್ತದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರು ಜಾಥಾ ಉದ್ಘಾಟಿಸುವರು.

# ಇಂದು ಪದ್ಮಗಂಧಿ ಸಿನಿಮಾ ಪ್ರದರ್ಶನ-ಸಂವಾದ

ಹಾಸನ: ಖ್ಯಾತ ಚಲನಚಿತ್ರ ನಟ, ನಿರ್ದೇಶಕ ಸುಚೇಂದ್ರ ಪ್ರಸಾದ್ ನಿರ್ದೇಶನದ ಪದ್ಮಗಂಧಿ ಸಿನಿಮಾ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮವನ್ನು ನಗರದ ಎಸ್‌ಬಿಜಿ ಚಿತ್ರ ಮಂದಿರದಲ್ಲಿ ಫೆ. 1ರ ಭಾನುವಾರ ಬೆಳಿಗ್ಗೆ 9.30ಕ್ಕೆ ಏರ್ಪಡಿಸಲಾಗಿದೆ.

ಸಂಸ್ಕೃತ ಭಾಷೆಯನ್ನು ಆದ್ಯತೆಯಾಗಿ ರಚನೆಯಾಗಿರುವ ಚಿತ್ರ ಇದಾಗಿದೆ. ವಿಧಾನ ಪರಿಷತ್ ಮಾಜಿ ಸದಸ್ಯೆ ಪ್ರೊ. ಎಸ್. ಆರ್. ಲೀಲಾ ಅವರ ಕಥೆ ಆಧಾರಿತ ಸಿನಿಮಾ ಪದ್ಮಗಂಧಿ. ಆಸಕ್ತರು ಟಿಕೆಟ್‌ಗಾಗಿ ಮೊ.ನಂ. 9141335473 ಇಲ್ಲಿಗೆ ಸಂಪರ್ಕಿಸಬಹುದು.

# ಇಂದು ಕೇಂದ್ರ ಬಜೆಟ್: ಜಿಲ್ಲೆಗೆ ಸಿಹಿಯೋ-ಕಹಿಯೋ?

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಸಕ್ತ ಸಾಲಿನ ಕೇಂದ್ರ ಬಜೆಟ್ ಫೆ. 1ರ ಭಾನುವಾರ ಮಂಡನೆಯಾಗಲಿದ್ದು, ಜಿಲ್ಲೆಗೆ ಮಹತ್ವದ ಯೋಜನೆಗಳು ಘೋಷಣೆಯಾಗುವ ನಿರೀಕ್ಷೆ ಗರಿಗೆದರಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇದೇ ಮೊದಲ ಬಾರಿಗೆ ಭಾನುವಾರ ಆಯವ್ಯಯ ಮಂಡಿಸಲು ಸಜ್ಜಾಗಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದು, ಬಿಜೆಪಿ-ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಪ್ರಾಧಾನ್ಯತೆ ಸಿಗುವ ವಿಶ್ವಾಸ ಜನರಲ್ಲಿ ಮನೆ ಮಾಡಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯ ಹಾಗೂ ಜಿಲ್ಲೆಯ ಅಭಿವೃದ್ಧಿ ಕುರಿತಾಗಿ ಸುದೀರ್ಘ ಚರ್ಚೆ ನಡೆಸಿದ್ದಾರೆ. ಜೊತೆಗೆ ಕಳೆದ ಒಂದೂವರೆ ವರ್ಷದಿಂದ ಸಂಸದ ಶ್ರೇಯಸ್ ಪಟೇಲ್ ಅವರು ಹಲವು ಬಾರಿ ದೆಹಲಿ ಪ್ರವಾಸ ಕೈಗೊಂಡು ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುವಂತೆ ಮನವಿ ಸಲ್ಲಿಸುತ್ತಲೇ ಇದ್ದಾರೆ. ಸ್ಥಳೀಯ ಸಂಸ್ಥೆ, ಗ್ರಾಮ ಪಂಚಾಯಿತಿ ಚುನಾವಣೆ ದೃಷ್ಟಿಯಿಂದಲೂ ಬಿಜೆಪಿಗೆ ಬಜೆಟ್ ಮಹತ್ವದ್ದಾಗಿದೆ. ಕೇಂದ್ರ ಸಂಪುಟದಲ್ಲಿ ಹಾಸನದವರೇ ಆಗಿರುವ ಹೆಚ್.ಡಿ.ಕುಮಾರಸ್ವಾಮಿ ಇರುವುದರಿಂದ ಕೈಗಾರಿಕೆಗಳ ಸ್ಥಾಪನೆ, ವಿಮಾನ ನಿಲ್ದಾಣಕ್ಕೆ ವೇಗ ಹಾಗು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಘೋಷಣೆಯಾಗುವ ನಿರೀಕ್ಷೆ ಗರಿಗೆದರಿದೆ.

### ಐಐಟಿ ಘೋಷಣೆಯಾಗುವ ನಿರೀಕ್ಷೆ

ಜಿಲ್ಲೆಯ ಜನರು ಬಹುದಿನಗಳ ಬೇಡಿಕೆಯಾಗಿರುವ ಐಐಟಿ ಘೋಷಣೆಯಾಗುವ ಸಾಧ್ಯತೆ ಹೆಚ್ಚಿದೆ. ನಗರದಲ್ಲಿ ಐಐಟಿ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಹಲವು ಪ್ರಸ್ತಾವನೆ ಸಲ್ಲಿಸಲಾಗಿದೆ. ಐಐಟಿ ಸ್ಥಾಪನೆ ಸಂಬಂಧ 2013ರಲ್ಲೇ ಕೇಂದ್ರ ಸರ್ಕಾರ ವಿಶೇಷ ಅಧ್ಯಯನ ತಂಡವನ್ನು ಜಿಲ್ಲೆಗೆ ಕಳುಹಿಸಿತ್ತು. ಕಾಮಗಾರಿಗಾಗಿ




ಕೈಗಾರಿಕಾ ಪ್ರದೇಶದಲ್ಲಿ 1057 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ, ಪ್ರತಿ ಬಜೆಟ್‌ನಲ್ಲಿ ಈ ಕುರಿತು ನಿರಾಶೆ ಮುಂದುವರಿದಿದೆ. ಜ. 24ರಂದು ಹಾಸನದಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪ್ರಧಾನಿ ಮೋದಿ ಅವರಿಂದಲೇ ಐಐಟಿಗೆ ಚಾಲನೆ ಕೊಡಿಸುವುದಾಗಿ ಹೇಳಿದ್ದು, ಆಶಾವಾದ ಹೆಚ್ಚಿದೆ.

### ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಬೇಕು

ಅರಸೀಕೆರೆ-ಚನ್ನರಾಯಪಟ್ಟಣ-ಕೆ.ಆರ್.ಪೇಟೆ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಪ್ರಸ್ತಾವನೆ ಸಲ್ಲಿಸುತ್ತಲೇ ಇದ್ದಾರೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು. ಬಿಳಿಕೆರೆ-ಬೇಲೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ 950 ಕೋಟಿ ರೂ. ವೆಚ್ಚದ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಅನುಮೋದನೆಗೆ ಕಾಯುತ್ತಿದೆ.

ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಡಾನೆ-ಮಾನವ ಸಂಘರ್ಷ ಮಿತಿ ಮೀರಿದ್ದು ಸಮಸ್ಯೆಗೆ ಶಾಶ್ವತ ಪರಿಹಾರದ ಅವಶ್ಯವಿದೆ. ಬೇಲೂರು, ಸಕಲೇಶಪುರ ತಾಲ್ಲೂಕಿನಲ್ಲಿ 80ಕ್ಕೂ ಹೆಚ್ಚು ಕಾಡಾನೆಗಳಿವೆ. ಕಾಫಿ ತೋಟಗಳನ್ನೇ ಆವಾಸ ಸ್ಥಾನವಾಗಿಸಿಕೊಂಡಿರುವ ಆನೆಗಳು ಮನುಷ್ಯ ಜೀವದೊಂದಿಗೆ ಚೆಲ್ಲಾಟವಾಡುತ್ತಿವೆ. ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರಿಸುವ ಅಥವಾ ಆನೆ ಧಾಮ ನಿರ್ಮಿಸುವ ಅವಶ್ಯಕತೆ ಕುರಿತು ಆಗ್ರಹ ಕೇಳುತ್ತಲೇ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನಿರೀಕ್ಷಿತ ಅನುದಾನ ಘೋಷಿಸಬೇಕಿದೆ.

ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದಲೂ ಈ ಬಜೆಟ್ ಮಹತ್ವ ಪಡೆದುಕೊಂಡಿದೆ. ವಿಶ್ವವಿಖ್ಯಾತ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಸೇರಿ ಜಿಲ್ಲೆಯ ಪ್ರವಾಸಿ ತಾಣಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ಸಿಗುವ ನಿರೀಕ್ಷೆ ಇದೆ. ಕೇಂದ್ರ ಬೃಹತ್ ಕೈಗಾರಿಕಾ ಸಚಿವರಾಗಿ ಹೆಚ್.ಡಿ.ಕುಮಾರಸ್ವಾಮಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲೇ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಿ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಯೋಜನೆಗಳು ಬಜೆಟ್‌ನಲ್ಲಿ ಘೋಷಣೆಯಾಗುವ ನಿರೀಕ್ಷೆ ಇದೆ. ಒಟ್ಟಾರೆ, ಕೇಂದ್ರದ ಈ ಬಜೆಟ್ ಜಿಲ್ಲೆಯ ಅಭಿವೃದ್ಧಿಗೆ ದಿಕ್ಸೂಚಿಯಾಗಲಿದೆ ಎಂಬ ನಿರೀಕ್ಷೆ ಮೂಡಿದೆ.

# ನಾಳೆ ಶ್ರೀ ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪದ್ಮಭೂಷಣ, ಕರ್ನಾಟಕ ರತ್ನ, ತ್ರಿವಿಧ ದಾಸೋಹಿ ತುಮಕೂರು ಸಿದ್ದಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವವನ್ನು ಫೆ. 2ರ ಸೋಮವಾರ ನಗರದ ಮಹಾವೀರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆಯೆಂದು ವೀರಶೈವ ಲಿಂಗಾಯತ ವೇದಿಕೆ ರಾಜ್ಯ ಸಮಿತಿ ಸದಸ್ಯ ಬಿ.ಆರ್.ವಸಂತಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಅಂದು ಬೆಳಿಗ್ಗೆ 10.30 ರಿಂದ ಸಂಜೆ 4ರ ವರೆಗೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ನೆರವೇರಲಿದೆ. ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಅವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಹೇಳಿದರು.

ಮೈಸೂರು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವೀರಶೈವ ಲಿಂಗಾಯತ ಮಹಾವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರ್, ಕರುನಾಡ ವಿಜಯ ಸೇನೆ ರಾಜ್ಯಾಧ್ಯಕ್ಷ ದೀಪಕ್, ಬಿಜೆಪಿ ಮುಖಂಡ ಪುನೀತ್ ಬನ್ನಹಳ್ಳಿ ಭಾಗವಹಿಸಲಿದ್ದಾರೆಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಪ್ರಸನ್ನಕುಮಾರ್, ಅವಿನಾಶ್ ದೇವರಾಜು ಉಪಸ್ಥಿತರಿದ್ದರು.

# ಆರು ತಿಂಗಳಾದರೂ ಪಾವತಿಯಾಗದ ಶೌಚಾಲಯ ಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಿಸಿ ಆರು ತಿಂಗಳು ಕಳೆದರೂ ಹಣ ಪಾವತಿಯಾಗಿಲ್ಲ. ಜಿಲ್ಲಾಡಳಿತ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸಬೇಕೆಂದು ಅರಸೀಕೆರೆಯ 24 ಫಲಾನುಭವಿಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಸರ್ಕಾರದ ಸೂಚನೆ ಮತ್ತು ಅಧಿಕಾರಿಗಳ ಸಲಹೆಯಂತೆ ಸಹಾಯಧನ ಬರುತ್ತದೆಂದು ಸ್ವಂತ ಹಣ ತೊಡಗಿಸಿ ಶೌಚಾಲಯ ನಿರ್ಮಿಸಿದ್ದೇವೆ. ಅದಕ್ಕೆ ಸಂಬಂಧಿಸಿದ ಜಿಪಿಎಸ್ ಫೋಟೊ, ಅಗತ್ಯ ದಾಖಲೆಗಳನ್ನು ಸಲ್ಲಿಸಲಾಗಿದೆ. ಆದರೆ ಹಣ ಪಾವತಿಯಾಗಿಲ್ಲ. ಈ ಸಂಬಂಧ ನಗರಸಭೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಜಿಲ್ಲಾಧಿಕಾರಿ ಅವರನ್ನೇ ಭೇಟಿಯಾಗಿ ಎನ್ನುತ್ತಾರೆ. ಶೌಚಾಲಯ ನಿರ್ಮಾಣಕ್ಕೆ ಸಲಹೆ ನೀಡಿದ ಅಧಿಕಾರಿಗಳು ಈಗ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲವೆಂದು ಆರೋಪಿಸಿದರು.

ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬರಬೇಕಾದ ಅನುದಾನ ಕಡಿತಗೊಳಿಸಿ, ಅತಿ ಕಡಿಮೆ ಪ್ರಮಾಣದ ಹಣವನ್ನು ಮಾತ್ರ ಫಲಾನುಭವಿಗಳಿಗೆ ನೀಡಲು ಕೆಲ ಅಧಿಕಾರಿಗಳು ಮುಂದಾಗಿದ್ದಾರೆ. ಈ ಬಗ್ಗೆ ಸ್ಥಳೀಯವಾಗಿ ಚರ್ಚೆ ನಡೆಯುತ್ತಿದೆ. ಅಧಿಕಾರಿಗಳು ಈ ಯೋಜನೆಯಲ್ಲೂ ಲೂಟಿ ಹೊಡೆಯಲು ಮುಂದಾಗಿದ್ದಾರೆಂಬ ಅನುಮಾನ ಕಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕುಟುಂಬಗಳಿಗೆ ಸಾವಿರಾರು ರೂಪಾಯಿ ಸಾಲವಾಗಿದೆ. ಹಣ ಪಾವತಿಯಾಗದ ಕಾರಣ ಸಾಲದ ಬಡ್ಡಿ, ಮನೆ ಖರ್ಚು ಮತ್ತು ಜೀವನ ನಿರ್ವಹಣೆ ಕಷ್ಟವಾಗಿದೆ. ಸರ್ಕಾರದ ಮಾತು ನಂಬಿ ಶೌಚಾಲಯ ಕಟ್ಟಿದ್ದೇವೆ. ಆದರೆ ಹಣ ಕೊಡದೆ ಮೋಸ ಮಾಡುತ್ತಿದ್ದಾರೆಂದು ಫಲಾನುಭವಿಗಳು ಬೇಸರ ವ್ಯಕ್ತಪಡಿಸಿದರು. ಸ್ವಚ್ಛತೆ ಮತ್ತು ಆರೋಗ್ಯದ ಹೆಸರಿನಲ್ಲಿ ಜನರನ್ನು ಪ್ರೋತ್ಸಾಹಿಸುವ ಸರ್ಕಾರ, ಹಣ ಪಾವತಿಯಲ್ಲಿ ವಿಳಂಬ ಮಾಡುವುದರಿಂದ ಯೋಜನೆಗಳ ಮೇಲಿನ ಜನರ ನಂಬಿಕೆ ಕುಸಿಯುತ್ತಿದೆ. ಇಂತಹ ನಿರ್ಲಕ್ಷ್ಯ ಮುಂದುವರೆದರೆ ಭವಿಷ್ಯದಲ್ಲಿ ಯಾವುದೇ ಸರ್ಕಾರಿ ಯೋಜನೆಗಳಿಗೆ ಜನರು ಮುಂದೆ ಬರದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಎಚ್ಚರಿಸಿದರು. ಅರಸೀಕೆರೆ ನಗರಸಭೆ ಮಾಜಿ ಸದಸ್ಯ ಇಮ್ರಾನ್ ಖಾನ್, ಕಮಿಲ್ ಉಲ್ಲಾ, ಪಾಷಾ, ರೂಪ, ಶಾಹಿನಾ ಬೇಗಂ, ಕಲೀಂ, ಜಬೀನಾ ಮತ್ತಿತರರಿದ್ದರು.

# ಲ್ಯಾಂಡ್ ಲಾರ್ಡ್ ಸಿನಿಮಾ ಯಶಸ್ಸಿಗೆ ದಲಿತ ಮುಖಂಡರ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ತಳ ಸಮುದಾಯಗಳು ಅನುಭವಿಸುತ್ತಿರುವ ನೋವು, ಶೋಷಣೆ ಹಾಗೂ ಸಾಮಾಜಿಕ ಅಸಮಾನತೆಯನ್ನು ಪ್ರತಿಬಿಂಬಿಸುವ ಲ್ಯಾಂಡ್ ಲಾರ್ಡ್ ಸಿನಿಮಾವನ್ನು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿ ಗೆಲ್ಲಿಸಬೇಕು. ಅದೇ ರೀತಿ ಈ ಸಿನಿಮಾಗೆ ಸರ್ಕಾರ ಶೇ. 100 ತೆರಿಗೆ ವಿನಾಯಿತಿ ನೀಡಬೇಕೆಂದು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಕೃಷ್ಣದಾಸ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಡೇಶ್ ಕೆ. ಹಂಪಿ ನಿರ್ದೇಶನದ ಈ ಚಿತ್ರಕ್ಕೆ ರಾಜ್ಯಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿದೆ. ದುನಿಯಾ ವಿಜಯ್, ರಾಜ್ ಬಿ. ಶೆಟ್ಟಿ, ರಚಿತಾ ರಾಮ್ ಮನೋಜ್ಞವಾಗಿ ನಟಿಸಿದ್ದಾರೆ. ಸಿನಿಮಾ ಪ್ರೇಮಿಗಳು ಚಿತ್ರದ ಕಥೆ, ಸಂಭಾಷಣೆ, ಹಾಡು ಹಾಗು ಸಂದೇಶವನ್ನು ಮೆಚ್ಚಿದ್ದಾರೆ. ಇಂತಹ ಧೈರ್ಯಶಾಲಿ ಕಥಾವಸ್ತುವನ್ನು ಆಯ್ದುಕೊಂಡು ಸಿನಿಮಾ ನಿರ್ಮಿಸಿರುವುದು ಹೆಗ್ಗಳಿಕೆ ಎಂದರು.

ಈ ಚಿತ್ರವನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸದೆ ಸಮಾಜದ ಎಲ್ಲಾ ಶೋಷಿತ ವರ್ಗಗಳ ಬದುಕಿನ ಪ್ರತಿನಿಧಿಯಾಗಿ ರೂಪಿಸಲಾಗಿದೆ.

ಶತಮಾನಗಳ ಹಿಂಸೆ, ದೌರ್ಜನ್ಯ, ಅನ್ಯಾಯ ಅನುಭವಿಸುತ್ತಾ ಬಂದ ತಳ ಸಮುದಾಯಗಳ ನೋವುಗಳನ್ನು ಸಂವೇದನಾಶೀಲವಾಗಿ ಚಿತ್ರಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 79 ವರ್ಷ, ಸಂವಿಧಾನ ಜಾರಿಯಾಗಿ 76 ವರ್ಷ ಕಳೆದರೂ ತಳ ಸಮುದಾಯಗಳ ಬದುಕು ಇನ್ನೂ ಅಸಹನೀಯವಾಗಿದೆ.

ಜಾತಿ ಆಧಾರಿತ ಹಲ್ಲೆ, ದೌರ್ಜನ್ಯ ಹಾಗು ಕೊಲೆಗಳು ನಿರಂತರವಾಗಿ ನಡೆಯುತ್ತಿವೆ ವಿಷಾದಿಸಿದರು.

ಚಲನಚಿತ್ರವು ಹಿಂಸೆಯಿಂದ ಅಹಿಂಸೆಯ ಕಡೆಗೆ ಸಮಾಜವನ್ನು ಕರೆದೊಯ್ಯುವ ಸಂದೇಶ ಹೊಂದಿದೆ. ಪ್ರತಿಯೊಬ್ಬ ನಾಗರಿಕನಿಗೂ ಸಂವಿಧಾನ ನೀಡಿರುವ ಸಮಾನ ಹಕ್ಕು ಮತ್ತು ಅವಕಾಶಗಳು ದೊರಕಬೇಕೆಂದು ಬಲವಾಗಿ ಪ್ರತಿಪಾದಿಸುತ್ತದೆ. ಜೊತೆಗೆ, ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರಿಗೆ ಇನ್ನೂ ಸಮಾನ ಹಕ್ಕುಗಳು ಸಿಗದಿರುವ ವಾಸ್ತವವನ್ನು ತೆರೆದಿಟ್ಟಿದೆ. ಮಹಿಳೆಯರ ಸಬಲೀಕರಣ ಹಾಗೂ ಶೋಷಿತ ವರ್ಗಗಳ ವಿಮೋಚನೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣವೇ ಏಕೈಕ ದಾರಿ ಎಂಬ ಸಂದೇಶವನ್ನು ವಿಭಿನ್ನ ಹಾಗೂ ಪ್ರಭಾವಶಾಲಿ ರೀತಿಯಲ್ಲಿ ಚಿತ್ರಿಸಲಾಗಿದೆ ಎಂದರು. ಚಿತ್ರದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಜಿಲ್ಲಾದ್ಯಂತ ಜನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ಒಕ್ಕೂಟದ ಸಣ್ಣೇಗೌಡ, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಈರೇಶ್ ಹಿರೇಹಳ್ಳಿ, ಜಾಗೃತ ಅಲೆಮಾರಿ ಸಮುದಾಯಗಳ ರಾಜ್ಯ ಒಕ್ಕೂಟದ ರಾಜ್ಯಾಧ್ಯಕ್ಷ ಎಂ.ವಿ.ಗೋವಿಂದರಾಜು, ಮಣಚನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಗುಡ್ಡೇನಹಳ್ಳಿ ರಂಗಸ್ವಾಮಿ, ಪೌರಕಾರ್ಮಿಕ ಮುಖಂಡ ನಲ್ಲಪ್ಪ ಇದ್ದರು.

# ಇಂದು ಪತ್ರಕರ್ತರ ಕ್ರೀಡಾಕೂಟ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಆರೋಗ್ಯದ ದೃಷ್ಟಿಯಿಂದ ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದು ಒಳ್ಳೆಯದು ಎಂದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಯುವರಾಜ್ ಹೇಳಿದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ಪ್ರಯುಕ್ತ ಆಯೋಜಿಸಿದ್ದ ಟೀ ಶರ್ಟ್ ಬಿಡುಗಡೆ ಹಾಗೂ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೀಡೆಯ ಜೊತೆಗೆ ಸ್ನೇಹ ಹಾಗೂ ಸೌಹಾರ್ದತೆ ಮುಖ್ಯ. ಕ್ರೀಡೆ ಎಂಬುದು ಮನರಂಜನೆಯಾಗಿರಬೇಕು ಅಷ್ಟೇ. ಗೆಲುವು ಹಾಗೂ ಸೋಲನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಸೋತ ತಕ್ಷಣ ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಗೆಲುವು ಒಂದು ಗುರಿಯಾಗಿರಬೇಕು ಹೊರತು ಗೆಲುವೇ ಉದ್ದೇಶವಾಗಿರಬಾರದು. ಸೋಲಿನ ನಂತರ ಗೆಲುವು ಇದ್ದೇ ಇರುತ್ತದೆ ಎಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್.ದೀಪ ಮಾತನಾಡಿ, ಕ್ರೀಡಾಪಟುಗಳಲ್ಲಿ ಶ್ರದ್ದೆ, ಶಿಸ್ತು ಹಾಗೂ ಕಠಿಣ ಪರಿಶ್ರಮ ಅಗತ್ಯವಿದೆ. ನಿರಂತರ ಅಭ್ಯಾಸದಿಂದ ಯಾವುದೇ ಕ್ರೀಡೆಯಲ್ಲಿ ಭಾಗವಹಿಸಿದರೆ ಸಾಧನೆಯ ಗುರಿ ಸುಲಭವಾಗಲಿದೆ ಎಂದರು. ವಿವಿಧ ಇಲಾಖೆಗಳ ಅಧಿಕಾರಿಗಳು ಟೀ ಶರ್ಟ್ ಬಿಡುಗಡೆಗೊಳಿಸಿ ಟ್ರೋಫಿ ಅನಾವರಣ ಮಾಡಿದರು.

ತಾಲೂಕು ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಉಪಾಧ್ಯಕ್ಷರಾದ ನಂದನ್ ಪುಟ್ಟಣ್ಣ, ಕೆ.ಪಿ.ಪುಟ್ಟರಾಜು, ಪ್ರಧಾನ ಕಾರ್ಯದರ್ಶಿ ಆರ್.ಶ್ರೀನಿವಾಸ್ ಉಳ್ಳಾವಳ್ಳಿ, ಕಾರ್ಯದರ್ಶಿಗಳಾದ ಜಯಕುಮಾರ್, ನಾಗೇಂದ್ರ.ರಾ.ಯ., ಖಜಾಂಚಿ ಎ.ಎಲ್.ನಾಗೇಶ್, ನಿಕಟಪೂರ್ವ ಅಧ್ಯಕ್ಷ ಸಿದ್ದರಾಜು, ನಿರ್ದೇಶಕರಾದ ಎ.ನಟೇಶ್, ಪಾಂಡುರಂಗ, ಸದಸ್ಯರಾದ ಹಿ.ಕೃ.ಚಂದ್ರು, ಮಂಜುನಾಥ್ ಹಂಚೀಹಳ್ಳಿ, ಐ.ಕೆ. ಮಂಜುನಾಥ್, ಪ್ರದೀಪ್, ಗೋವಿಂದ್, ಗೋವಿಂದ ರಾಜ್ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಇದ್ದರು.

# ಶಾಸಕ ಹೆಚ್.ಕೆ.ಸುರೇಶ್ ವಿರುದ್ಧ ಬಿ.ಶಿವರಾಂ ಗಂಭೀರ ಆರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಶಾಸಕ ಹೆಚ್.ಕೆ.ಸುರೇಶ್ ಅವರು ತಮ್ಮ ಹಿಂಬಾಲಕರಿಗೆ ಗುತ್ತಿಗೆ ನೀಡಲು ನಡೆಸುತ್ತಿರುವ ಪ್ರಯತ್ನವನ್ನು ಕ್ಷೇತ್ರ ಅಭಿವೃದ್ಧಿಗೆ ಹಾಕುತ್ತಿಲ್ಲ. ಗುತ್ತಿಗೆ, ರಿಯಲ್ ಎಸ್ಟೇಟ್ ಪರಿಣತರಿಂದ ಯಾವ ಪ್ರಯೋಜನವಿಲ್ಲವೆಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇಲೂರು ಪುರಸಭೆ ವ್ಯಾಪ್ತಿಯಲ್ಲಿ 10 ಕೋಟಿ ರೂ. ಅನುದಾನದಲ್ಲಿ ರಸ್ತೆ, ಚರಂಡಿ ಕಾಮಗಾರಿ ನಡೆಯುತ್ತಿದ್ದು ಬಹುತೇಕ ಕೆಲಸಗಳನ್ನು ಶಾಸಕ ಹೆಚ್.ಕೆ.ಸುರೇಶ್ ತಮ್ಮ ಹಿಂಬಾಲಕರಿಗೆ ನೀಡಿದ್ದಾರೆ. ಅಧಿಕಾರಿಗಳನ್ನು ಹೆದರಿಸಿ ಸಿಂಗಲ್ ಟೆಂಡರ್ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಕಳಪೆ ಕಾಮಗಾರಿ ಮಾಡುತ್ತಿರುವುದು ಮಾತ್ರವಲ್ಲದೇ ಕೆಲಸ ಮುಗಿಯುವ ಮೊದಲೇ ಬಿಲ್ ಪಡೆಯುತ್ತಿದ್ದಾರೆಂದು ದೂರಿದರು. ಪಟ್ಟಣದ ಬಿಕ್ಕೋಡು ರಸ್ತೆಯಲ್ಲಿ 3.5 ಕೋಟಿ ರೂ., ಗೆಂಡೆಹಳ್ಳಿ ರಸ್ತೆ 3.5 ಕೋಟಿ ರೂ., ವೈಕುಂಠ ಬೀದಿ 1 ಕೋಟಿ ರೂ., ದೇವಾಂಗ ಬೀದಿಯಲ್ಲಿ 1 ಕೋಟಿ ರೂ. ವೆಚ್ಚದ ಕಾಮಗಾರಿ ನಡೆಯುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ಚರಂಡಿ, ರಸ್ತೆ ಅವ್ಯವಸ್ಥೆಯಿಂದ ಸಾರ್ವಜನಿಕರು ಪರದಾಡುತ್ತಿದ್ದಾರೆ. ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರ ಗಮನಕ್ಕೆ ತಾರದೆ ಅಧಿಕಾರಿಗಳನ್ನು ಹೆದರಿಸಿ ತಮಗೆ ಬೇಕಾದ ರೀತಿ ಕಾಮಗಾರಿ ಮಾಡುತ್ತಿದಾರೆ. ಈ ಬಗ್ಗೆ ಅಧಿಕಾರಿಗಳ ವಿರುದ್ಧ ದೂರು ನೀಡುವುದಾಗಿ ತಿಳಿಸಿದರು.

ಪುರಸಭೆ ವ್ಯಾಪ್ತಿಯ ಗೆಂಡೆಹಳ್ಳಿ ರಸ್ತೆ ಕಾಮಗಾರಿಯನ್ನು ನನ್ನ ಬೆಂಬಲಿಗರು ಮಾಡುತ್ತಿದ್ದಾರೆಂಬ ಮಾತುಗಳು ಕೇಳಿಬಂದಿವೆ. ಈ ಆರೋಪ ಶುದ್ಧ ಸುಳ್ಳು. ಒಂದು ವೇಳೆ ನನ್ನ ಬೆಂಬಲಿಗರೇ ಕೆಲಸ ಮಾಡುತ್ತಿದ್ದರೆ ಮರು ಟೆಂಡರ್ ನಡೆಸಲಿ. ಗುತ್ತಿಗೆಯೊಂದಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವ ಇಂತವರಿಂದ ಅಭಿವೃದ್ಧಿ ಹೇಗೆ ಸಾಧ್ಯವೆಂದು ಪ್ರಶ್ನಿಸಿದರು. ಕಾಂಗ್ರೆಸ್ ಮುಖಂಡರಾದ ಚೇತನ್ ಇತರರು ಇದ್ದರು.

# ಸಂಚಾರ ಪೊಲೀಸರಿಂದ ರಸ್ತೆ ಸುರಕ್ಷತಾ ಅರಿವು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲ್ನಾಡ್ ಹಿಪ್ಪೋ ಕ್ಯಾಂಪಸ್ ಇಂಟರ್ ನ್ಯಾಷನಲ್ ಶಾಲೆ ಹಾಗೂ ಸಂಚಾರ ಪೊಲೀಸರಿಂದ ರಸ್ತೆ ಸುರಕ್ಷತೆ ಮಾಸಾಚರಣೆ ಅಂಗವಾಗಿ ರಸ್ತೆ ಸುರಕ್ಷತೆ ಕುರಿತು ಅರಿವು ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

ಪಿಎಸ್‌ಐ ಶ್ರೀನಿವಾಸ್ ಮಾತನಾಡಿ, ರಸ್ತೆ ಸುರಕ್ಷತೆ ಮಹತ್ವ, ಸಂಚಾರ ನಿಯಮಗಳ ಪಾಲನೆ ಹಾಗು ಕಾನೂನು ಅರಿವಿನ ಬಗ್ಗೆ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ರಸ್ತೆ ಅಪಘಾತ ತಡೆಯಲು ಎಲ್ಲರೂ ಜವಾಬ್ದಾರಿಯಿಂದ ವರ್ತಿಸಬೇಕೆಂದು ಕರೆ ನೀಡಿದರು. ಶಾಲೆಯ ವಿದ್ಯಾರ್ಥಿಗಳು ಅಣಕು ನಾಟಕದ ಮೂಲಕ ಸಂಚಾರ ಸೂಚನೆಗಳನ್ನು ಹೇಗೆ ಪಾಲಿಸಬೇಕು ಹಾಗು ಜವಾಬ್ದಾರಿಯುತ ನಾಗರಿಕರಾಗಿ ಹೇಗೆ ವರ್ತಿಸಬೇಕೆಂದ ಸಂದೇಶ ಸಾರಿದರು.

ಅಲ್ಲದೆ ಶಾಲೆಯ ವಿದ್ಯಾರ್ಥಿಗಳು ಸಂಚಾರ ಪೊಲೀಸರ ಸಹಕಾರದೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಜಾಥಾ ನಡೆಸಿ ಅರಿವು ಮೂಡಿಸಿದರು.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-01

**1884:** ಆಕ್ಸ್ ಫರ್ಡ್ ಇಂಗ್ಲಿಷ್ ಡಿಕ್ಷನರಿಯ ಮೊದಲ ಸಂಪುಟ ಪ್ರಕಟವಾಯಿತು.

**1896:** ಅಮೇರಿಕಾದಲ್ಲಿ ಮೊದಲ ಎಕ್ಸ್ ರೇ ಚಿತ್ರವನ್ನು ಸಾರ್ವಜನಿಕವಾಗಿ ಪ್ರದರ್ಶಿಸಲಾಯಿತು.

**1949:** ಇಂಗ್ಲಿಷ್ ಭಾಷೆಯ ಮೊದಲ ಟಿವಿ ಸೋಪ್ ಒಪೆರಾ ಪ್ರಸಾರ ಆರಂಭವಾಯಿತು.

**2003:** ಅಮೇರಿಕಾದ ಕೊಲಂಬಿಯಾ ಬಾಹ್ಯಾಕಾಶ ನೌಕೆ ವಾಪಸಾಗುವ ವೇಳೆ ಅಪಘಾತಕ್ಕೀಡಾಗಿ ಏಳು ಅಂತರಿಕ್ಷ ಯಾತ್ರಿಗಳು ಮೃತರಾದರು.

### ಜನನ

**1901:** ಕ್ಲಾರ್ಕ್ ಗೇಬಲ್, ಪ್ರಸಿದ್ಧ ಹಾಲಿವುಡ್ ನಟ

**1965:** ಬ್ರ್ಯಾಂಡನ್ ಲೀ, ನಟ ಹಾಗೂ ಮಾರ್ಷಲ್ ಆರ್ಟಿಸ್ಟ್

### ಮರಣ

**1920:** ಬಾಲಗಂಗಾಧರ ತಿಲಕ್, ಭಾರತೀಯ ಸ್ವಾತಂತ್ರ್ಯ ಹೋರಾಟಗಾರ

# ಒಂಟಿ ಪೋಷಕರ ಬದುಕು: ಮೌನದೊಳಗಿನ ಮಹಾ ತ್ಯಾಗ

**- ವಿಶ್ವಾಸ್ ಡಿ. ಗೌಡ, ಸಕಲೇಶಪುರ**

ಸಮಾಜದಲ್ಲಿ ಕುಟುಂಬವೆಂದರೆ ಸಾಮಾನ್ಯವಾಗಿ ತಂದೆತಾಯಿಮಕ್ಕಳು ಎಂಬ ಪೂರ್ಣ ವಲಯವೆಂದು ಭಾವಿಸಲಾಗುತ್ತದೆ. ಆದರೆ ಜೀವನದ ಅನಿವಾರ್ಯತೆಗಳು, ವಿಧಿಯ ಆಟಗಳು, ಮರಣ, ವಿಚ್ಛೇದನ ಅಥವಾ ಬೇರೆ ಕಾರಣಗಳಿಂದಾಗಿ ಅನೇಕ ಕುಟುಂಬಗಳು ಒಂಟಿ ತಂದೆ ಅಥವಾ ಒಂಟಿ ತಾಯಿಯ ಮೇಲೆ ನಿಂತಿರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳನ್ನು ಸಾಕುವ ಹೊಣೆಗಾರಿಕೆ, ಜವಾಬ್ದಾರಿ, ಕಿರಿಕಿರಿ, ತಳಮಳ ಹಾಗೂ ಭವಿಷ್ಯದ ಬಗ್ಗೆ ಇರುವ ಆತಂಕಗಳು ಅಪಾರವಾಗಿರುತ್ತವೆ. ಒಂಟಿ ಪೋಷಕರ ಜೀವನದ ಮೊದಲ ದೊಡ್ಡ ಹೊಣೆಗಾರಿಕೆ ಮಕ್ಕಳ ಸಂಪೂರ್ಣ ಜವಾಬ್ದಾರಿಯೇ ಆಗಿದೆ. ಆರ್ಥಿಕ ಹೊಣೆಗಾರಿಕೆ, ಶಿಕ್ಷಣ, ಆರೋಗ್ಯ, ಭದ್ರತೆ, ಸಂಸ್ಕಾರ ಒಂದೇ ವ್ಯಕ್ತಿಯ ಮೇಲೆ ಬೀಳುತ್ತವೆ. ಮನೆಯ ಆದಾಯ ಗಳಿಸುವುದರಿಂದ ಹಿಡಿದು ಮಕ್ಕಳ ಶಾಲಾ ಶುಲ್ಕ ಪಾವತಿಸುವವರೆಗೆ, ದಿನನಿತ್ಯದ ಆಹಾರ, ಬಟ್ಟೆ, ಔಷಧಿ ಎಲ್ಲವನ್ನೂ ಒಬ್ಬರೇ ನೋಡಿಕೊಳ್ಳಬೇಕಾಗುತ್ತದೆ. ಇದು ದೈಹಿಕ ಶ್ರಮಕ್ಕಿಂತಲೂ ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತದೆ. ಒಂಟಿ ತಂದೆ ಅಥವಾ ತಾಯಿ ಅನುಭವಿಸುವ ಕಿರಿಕಿರಿ ಸಾಮಾನ್ಯಕುಟುಂಬಕ್ಕಿಂತ ಹೆಚ್ಚು. ಕೆಲಸದ ಒತ್ತಡದ ನಡುವೆ ಮಕ್ಕಳ ಕಾಳಜಿ, ಅವರ ಪ್ರಶ್ನೆ, ಅಸಮಾಧಾನ,



ಬೇಡಿಕೆಗಳು ಎದುರಾಗುತ್ತವೆ. ಕೆಲವೊಮ್ಮೆ ಮಕ್ಕಳ ಅಜಾಗರೂಕ ವರ್ತನೆ, ಹಠ, ಅಸಮಯದ ಅಳಾಟ ಪೋಷಕರ ಮನಸ್ಸನ್ನು ಮತ್ತಷ್ಟು ಕಿರಿಕಿರಿ ಮಾಡುತ್ತದೆ. ಆದರೆ ಈ ಕಿರಿಕಿರಿಯನ್ನು ಹೊರಹಾಕಲು ಅವರಿಗೆ ಅವಕಾಶವಿಲ್ಲ; ಏಕೆಂದರೆ ಮಕ್ಕಳ ಮುಂದೆ ಧೈರ್ಯವಾಗಿ ನಿಲ್ಲಬೇಕಾಗುತ್ತದೆ.

ತಳಮಳ ಎನ್ನುವುದು ಒಂಟಿ ಪೋಷಕರ ಜೀವನದ ಮತ್ತೊಂದು ದೊಡ್ಡ ನೆರಳು. ಔನಾನು ಸರಿಯಾಗಿ ಮಕ್ಕಳನ್ನು ಬೆಳೆಸುತ್ತಿದ್ದೇನೆನಾಟ, ಔನನ್ನ ಕೊರತೆಯಿಂದ ಮಕ್ಕಳಿಗೆ ಏನಾದರೂ ಹಾನಿಯಾಗುತ್ತಿದೆಯಾಟ, ಔನನ್ನ ನಂತರ ಅವರ ಬದುಕು ಹೇಗಿರಬಹುದುಟ ಎಂಬ ಪ್ರಶ್ನೆಗಳು ಅವರನ್ನು ನಿರಂತರವಾಗಿ ಕಾಡುತ್ತವೆ. ಮಕ್ಕಳಿಗೆ ತಂದೆ ಅಥವಾ ತಾಯಿ ಇಬ್ಬರ ಪ್ರೀತಿ ಸಿಗದಿರುವ ಕೊರತೆ ಮನಸ್ಸಿನಲ್ಲಿ ನೋವನ್ನೇ ಉಂಟುಮಾಡುತ್ತದೆ. ಆ ಕೊರತೆಯನ್ನು ತಾವೇ ತುಂಬಬೇಕು ಎಂಬ ಜವಾಬ್ದಾರಿ ಪೋಷಕರಿಗೆ ಹೆಚ್ಚುವರಿ ತಳಮಳವನ್ನುಂಟುಮಾಡುತ್ತದೆ. ಸಾಮಾಜಿಕ ಒತ್ತಡವೂ ಒಂಟಿ ತಂದೆ ಅಥವಾ ತಾಯಿಗೆ ದೊಡ್ಡ ಸವಾಲು. ಕೆಲವರು ಸಹಾನುಭೂತಿಯಿಂದ ನೋಡಿದರೆ, ಕೆಲವರು ಅನುಮಾನದಿಂದ ಅಥವಾ ಟೀಕೆಯ ದೃಷ್ಟಿಯಿಂದ ನೋಡುವುದು ಸಾಮಾನ್ಯ. ಮಕ್ಕಳ ಭವಿಷ್ಯದ ಬಗ್ಗೆ ಮಾತನಾಡುವಾಗ ಸಮಾಜದ ಪ್ರಶ್ನೆಗಳು, ಹೋಲಿಕೆಗಳು ಪೋಷಕರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಸಂದರ್ಭಗಳೂ ಇರುತ್ತವೆ. ಆದರೂ ಇಂತಹ ಎಲ್ಲ ಅಡೆತಡೆಗಳ ನಡುವೆಯೂ ಅವರು ಮಕ್ಕಳಿಗಾಗಿ ನಿಂತುಕೊಳ್ಳುತ್ತಾರೆ.

ಭವಿಷ್ಯದ ಜೀವನದ ಬಗ್ಗೆ ಒಂಟಿ ಪೋಷಕರಿಗೆ ಅಪಾರವಾದ ಚಿಂತೆ ಇರುತ್ತದೆ. ಮಕ್ಕಳ ಶಿಕ್ಷಣ, ಉದ್ಯೋಗ, ವಿವಾಹ, ಸಾಮಾಜಿಕ ಸ್ಥಾನಮಾನ. ತಮ್ಮ ಆರೋಗ್ಯ ಕುಸಿದರೆ ಮಕ್ಕಳ ಗತಿ ಏನು ಎಂಬ ಭಯವೂ ಅವರ ಮನಸ್ಸನ್ನು ಬಿಡುವುದಿಲ್ಲ. ಆದರೂ ಈ ಭಯದ ನಡುವೆಯೂ ಅವರು ಮಕ್ಕಳಲ್ಲಿ ಆತ್ಮವಿಶ್ವಾಸ, ಸ್ವಾವಲಂಬನೆ, ಮೌಲ್ಯಗಳನ್ನು ಬೆಳೆಸಲು ಪ್ರಯತ್ನಿಸುತ್ತಾರೆ.

ಇಂತಹ ಎಲ್ಲಾ ಕಷ್ಟಗಳ ನಡುವೆಯೂ ಒಂಟಿ ತಂದೆ ಅಥವಾ ತಾಯಿಯ ಜೀವನದಲ್ಲಿ ಅಪಾರವಾದ ತ್ಯಾಗ ಮತ್ತು ಪ್ರೀತಿ ಅಡಗಿದೆ. ಅವರು ತಮ್ಮ ಆಸೆಗಳನ್ನು, ಕನಸುಗಳನ್ನು, ಸಂತೋಷವನ್ನು ಮಕ್ಕಳಿಗಾಗಿ ಬಲಿಕೊಡುತ್ತಾರೆ. ಮಕ್ಕಳ ಒಂದು ನಗು, ಒಂದು ಸಾಧನೆ, ಒಂದು ಮೆಚ್ಚುಗೆ ಅವರ ಎಲ್ಲಾ ನೋವುಗಳನ್ನು ಮರೆಸುವ ಶಕ್ತಿಯುಳ್ಳದು. ಮಕ್ಕಳ ಯಶಸ್ಸೇ ಅವರ ಜೀವನದ ಅರ್ಥವಾಗುತ್ತದೆ.

ಒಟ್ಟಿನಲ್ಲಿ ಒಂಟಿ ತಂದೆ ಅಥವಾ ತಾಯಿಯ ಜೀವನ ಒಂದು ನಿರಂತರ ಹೋರಾಟ. ಆದರೆ ಅದು ಸೋಲಿನ ಕಥೆಯಲ್ಲ. ಅದು ಧೈರ್ಯ, ತಾಳ್ಮೆ, ಪ್ರೀತಿ ಮತ್ತು ಆಶಾವಾದದ ಕಥೆ. ಇಂತಹ ಪೋಷಕರು ಸಮಾಜಕ್ಕೆ ಮಾದರಿ. ಅವರ ಮಕ್ಕಳೂ ಸಹ ಜೀವನದಲ್ಲಿ ದೃಢವಾಗಿ ನಿಲ್ಲುವ ಶಕ್ತಿಯನ್ನು ಹೊಂದಿರುತ್ತಾರೆ. ಆದ್ದರಿಂದ ಒಂಟಿ ತಂದೆ ಅಥವಾ ತಾಯಿಯನ್ನು ಕೇವಲ ಸಹಾನುಭೂತಿಯ ದೃಷ್ಟಿಯಿಂದ ಅಲ್ಲ, ಗೌರವ ಮತ್ತು ಮೆಚ್ಚುಗೆಯ ದೃಷ್ಟಿಯಿಂದ ನೋಡಬೇಕಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248